Doc-272
T-P.2

R No KKNN 12 ಪ 12-4-74



ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ | 3 ಪ್ರ.ಸ

ತಲೆಗಂದಾಯ ಶುಲ್ಕ ವಜಾ ಪರಿಶೀಲನೆ

ಚಳುವಳಿಗೆ ಬೆಂಬಲ

★

ಪಾಟ್ನಾ— ಸಾಮೂಹಿಕ ಚಳವಳಿ ಅನುಕೂಲಕ್ಕಾಗಿ, ಜನಸಂಘ, ಎಸ್ಸೆಸ್ಪಿ ಶಾಸಕರು ರಾಜೀನಾಮೆ ಕೊಡಲು ನಿರ್ಧರಿಸಲಾಗಿದೆ – ಈ—ಮುಷ್ಕೆ ವಿದ್ಯಾರ್ಥಿಗಳು ಯುವಕರ ಚಳವಳವನ್ನು ಮತ್ತೆ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರಾರಂಭಿಸಿರುವರು – ಪ್ರತಿಬಂಧಕಾಜ್ಞೆಯನ್ನು ತಾ || 11 ರಿಂದ ಉಲ್ಲಂಘಿಸಲು ಜನಸಂಘ, ಹಳೇ ಕಾಂಗ್ರೆಸ್, ಎಸ್ಸೆಸ್ಪಿ, ಸೋಷಲಿಸ್ಟ್ ಪಾರ್ಟಿಯವರು ನಿರ್ಧರಿಸಿರುವರು – ಈ ಪಕ್ಷಗಳವರು ವಿದ್ಯಾರ್ಥಿಗಳ ಚಳವಳಕ್ಕೆ ಪೂರ್ಣ ಬೆಂಬಲ ಪ್ರತಿಜ್ಞೆ ಮಾಡಿರುವರಾದರೂ ಶ್ರೀ ಜಯಪ್ರಕಾಶ ನಾರಾಯಣರು ರಾಜಕೀಯವಲ್ಲವಾಗಿರುವದರಿಂದ. ಅವರ ನಾಯಕತ್ವವನ್ನು ತಿರಸ್ಕರಿಸಿರುವರು.

ಕುದುರೆ ಜೂಜು

ಮದರಾಸು— ಇತರ ರಾಜ್ಯಗಳು ಕುದುರೆ ಜೂಜು ನಡೆಸುತ್ತಿರುವಾಗ, ಇಲ್ಲಿ ರೇಸಿಂಗ್ ವಜಾ ಮಾಡುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯವರು ಶಾಸನಸಭೆಯಲ್ಲಿ ತಿಳಿಸಿದರು

ಕ್ಯಾಬರೆ ಬದಲು ಕಥಾಕಳಿ

ಕೊಚ್ಚಿ— ಸುಖಭೋಗ ಹೋಟಲುಗಳಲ್ಲಿ ಕ್ಯಾಬರೆ ಬದಲು ಕಥಾಕಳಿ ಜಾರಿಗೆ ತರಲು ಖ್ಯಾತ ಕಥಾಕಾಳಿ ಕಲಾವಿದ ಶ್ರೀ ಕಲಾರುಕುಡುಂ ಕೃಷ್ಣನ್ ನಾಯರ್ ಸಲಹೆ ಮಾಡಿರುವರು.

ಲೋಕಸಭೆಯಲ್ಲಿ ಸಭಾ ಪರಿತ್ಯಾಗ

ನವದೆಹಲಿ— ಲೋಕಸಭೆಯಲ್ಲಿ ಸ್ಪೀಕರರು, ಅಧ್ಯಕ್ಷರು ಪಾಂಡಿಚೆರಿ ಖರ್ಚಿಗೆ ಒಟ್ಟುಕೂಡಿದ ನಿಧಿಯಿಂದ ಹಣ ತೆಗೆದು ಕೊಳ್ಳುವಂತೆ ಮಾಡಿದ ಆಜ್ಞೆಯ ಮಸೂದೆಯನ್ನು ಮಂಡಿಸಲು ಸರಕಾರಕ್ಕೆ ಅನುಮತಿಕೊಟ್ಟಿದ್ದನ್ನು ಪ್ರತಿಭಟಿಸಿ, ಎಲ್ಲ ವಿರೋಧಿಗಳೂ ಸಭಾಪರಿತ್ಯಾಗ ಮಾಡಿದರು.

★

ಅಧಿಕಾರದ ಲಾಲಸೆ ಇಲ್ಲ

ನವದೆಹಲಿ— ತಾವು ಯಾವ ಪದವಿಯನ್ನಾಗಲೀ, ಎಷ್ಟೇ ಉನ್ನತ ಪದವಿಯನ್ನಾಗಲೀ ತಾವು ಇಚ್ಛಿಸುವುದಿಲ್ಲವೆಂದು ಶ್ರೀ ಜಯಪ್ರಕಾಶ ನಾರಾಯಣರು ಮತ್ತೆ ಸ್ಪಷ್ಟಪಡಿಸಿರುವರು.

★

ತಲೆಗಂದಾಯ ಶುಲ್ಕ

ನವದೆಹಲಿ— ಮೆಡಿಕಲ್ ಕಾಲೇಜುಗಳಲ್ಲಿ ತಲೆಗಂದಾಯ ಶುಲ್ಕ ವಸೂಲ್ಮಾಡುವುದನ್ನು ನಿಲ್ಲಿಸಲು ಸರಕಾರ ಶಾಸನ ತರಲು ಯೋಚಿಸುತ್ತಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ನಾಲ್ಕು ಅಂತಸ್ತು ಮೇಲಿಂದ ಬಿದ್ದು ಸತ್ತ

ನವದೆಹಲಿ— ಡೆಲ್ಲಿ ಟೆಲಿವಿಜನ್ ಕೇಂದ್ರದ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಗೌರ್ ಆಕಾಶವಾಣಿ ಭವನದಲ್ಲಿಯ 4 ನೇ ಅಂತಸ್ತಿನಲ್ಲಿಯ ತನ್ನ ಕೊಠಡಿಯಿಂದ ಕೆಳಕ್ಕೆ ಬಿದ್ದು ಸತ್ತನು.

"ಪ್ರಜಾರಾಜ್ಯ ರಕ್ಷಿಸಿ"

ಲಕ್ನೊ– ಉತ್ತರ ಪ್ರಜಾರಾಜ್ಯ ರಕ್ಷಿಸಿ ದಿನವು ನಿನ್ನೆ ಆಚರಿಸಲ್ಪಟ್ಟಿತು.

★

ಲೋಕಸಭೆಯಲ್ಲಿ ನಡೆಸಿದ ದುಷ್ಕೃತ್ಯ

ನವದೆಹಲಿ– ಲೋಕಸಭೆಯಲ್ಲಿ ಸಾರ್ವಜನಿಕ ಗ್ಯಾಲರಿಗೆ ಆಯುಧ ಹಿಡಿದು ಬಲಾತ್ಕಾರವಾಗಿ ನುಗ್ಗಿ ಬಂದ 25 ವರ್ಷದ ರತನ್ ಚಂದ್ರ ಗುಪ್ತನಿಗೆ, ಡೆಲ್ಲಿ ತಿಹಾರ್ ಕೇಂದ್ರ ಜೈಲಿನಲ್ಲಿ 1 ತಿಂಗಳು ಕಠಿಣಸಜೆ ಅನುಭವಿಸಲು ಆಜ್ಞೆ ಮಾಡಲಾಯಿತು.

★

ಬೆಂಗಳೂರು ಕಾರ್ಪೊರೇಷನ್

ಬೆಂಗಳೂರು— ಒಬ್ಬ ಸಾಧುವನ್ನು ವಸತಿ ಭಾಗದಲ್ಲಿ ಹೂತಿರುವ ವಿಷಯವು ವಿಾಟಿಂಗಿನಲ್ಲಿ ಬಂದು, ಮೇಯರ್ ಶ್ರೀ ಟಿ. ಡಿ. ನಾಗಣ್ಣನವರು ಪರಿಸ್ಥಿತಿಯನ್ನು ವಿವರಿಸಿದರು

★

ವರಹಾ ಪ್ರಾಜೆಕ್ಟ್

ಬೆಂಗಳೂರು— ವರಹಾ ಪ್ರಾಜೆಕ್ಟನ್ನು ಕೈಗೊಳ್ಳಲು ಸರ್ಕಾರ ನಿರ್ಧರಿಸಿರುವದಾಗಿ ಶಾಸನಸಭೆಯಲ್ಲಿ ತಿಳಿಸಲಾಯಿತು

★ ನವದೆಹಲಿ– ತ್ರಿಪಕ್ಷ ಒಪ್ಪಂದದಿಂದ ಉಪಖಂಡದಲ್ಲಿ ಶಾಂತಿ ನೆಲೆಸುವ ಆಶಯವನ್ನು ಬಾಂಗ್ಲಾದೇಶದ ಪ್ರಧಾನಿ ಶ್ರೀ ಮುಜೀಬ್ ವ್ಯಕ್ತಪಡಿಸಿದರು.

ಅಖಿಲ ಭಾರತ ಜನಪ್ರಿಯ ಸ್ಪರ್ಧೆ

ಪ್ರವೇಶ ಶುಲ್ಕ ಇಲ್ಲ – ನೀವು ಒಂದು ಬಹುಮಾನ ಗಳಿಸಲೇಬೇಕು

ಸಹಾಯಕ್ಕೆ ಮಾದರಿ ವೊತ್ತ 36

11	10	15
16	12	8
9	14	13

ಮೊದಲನೆ ಬಹುಮಾನ : ವೆಸ್ಪ ಸ್ಕೂಟರ್ ಅಥವಾ ಟೆಲಿವಿಷನ್ ಅಥವಾ ರೆಫ್ರಿಜರೇಟರ್ 2 ನೇ ಬಹುಮಾನ : ಒಂದು ಟೇಪ್ ರೆಕಾರ್ಡರ್ ಅಥವಾ ಆಟೋಮ್ಯಾಟಿಕ್ ಕ್ಯಾಮರಾ 3 ನೇ ಬಹುಮಾನ : (100) ಯಾಷಿಕ ಜಪಾನ್ ಮಾದರಿ 4 ಬ್ಯಾಂಡ್ ಆಲ್ ವರ್ಲ್ಡ್ ಟ್ರಾನ್ಸಿಸ್ಟರ್ ಬೆಲೆ ರೂ. 275/– ಇದರ ಅರ್ಧ ಬೆಲೆ ನೇಲೆ. ಪ್ರತಿ ಕುಟುಂಬಕ್ಕೆ ಜೀವಾವಧಿ ಕಾಣಿಕೆ.

ಪ್ರೇರಕರ ತೀರ್ಮಾನ ಕಡೆಯದು

ಖಾಲಿ ಚೌಕಗಳಲ್ಲಿ 9 (ಒಂಬತ್ತು) ರಿಂದ 17 (ಹದಿನೇಳು) ರ ವರೆಗೆ ಸಂಖ್ಯೆಗಳನ್ನು ಉಪಯೋಗಿಸಿರಿ ಅವನ್ನು ಮೇಲಿನಿಂದ ಕೆಳಗೆ, ಅಡ್ಡಲಾಗಿ, ಮೂಲೆಯಿಂದ ಕೂಡಿದಲ್ಲಿ ವೊತ್ತ 39 (ಮೂನತ್ತೊಂಬತ್ತು) ಆಗಬೇಕು. ಒಂದು ಸಂಖ್ಯೆಯನ್ನು ಒಂದು ಬಾರಿ ಮಾತ್ರ ಉಪಯೋಗಿಸಬೇಕು ಪ್ರವೇಶಗಳಿಗೆ ಖಾಲಿ ಕಾಗದ ಉಪಯೋಗಿಸಬೇಕು. ಬಹುಮಾನ ಗಳಿಸಿದವರು ಅಂಚೆವೆಚ್ಚ, ಪ್ಯಾಕಿಂಗ್ ಮತ್ತು ಲೈಸನ್ಸ್ ಶುಲ್ಕ ಕೊಡಬೇಕು. ಇಂಗ್ಲೀಷ್ ಅಥವಾ ಹಿಂದಿಯಲ್ಲಿ ಪ್ರವೇಶಗಳನ್ನು ಕಳುಹಿಸಬೇಕು ಫಲಿತಾಂಶಕ್ಕಾಗಿ 45 ಪೈಸೆ ಸ್ಟಾಂಪ್ ಕಳುಹಿಸಬೇಕು. ಕಡೇ ತಾರೀಖು 5-5-74 ಫಲಿತಾಂಶ ತಾರೀಖು 7-5-74

Dire tor — BAJAJ ENTERPRISES
P O Box No. 1264 DELHI-6

ಕಣ್ಣು ದಾನ

ಕಣ್ಣು ನಿಧಿಯ ಸಮಿತಿಗೆ ೮ ಮಂದಿ ತಮ್ಮ ಕಣ್ಣುಗಳನ್ನು ದಾನ ಮಾಡಿದರೆಂದು ಹೈದರಾಬಾದು ವಾರ್ತೆ ತಿಳಿಸುತ್ತದೆ.

ಪರೀಕ್ಷೆ ಬಂಡ್

ಮೂರು ದಿನಗಳಿಂದ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬಹಿಷ್ಕರಿಸುತ್ತಿರುವರೆಂದು ಔರಂಗಾಬಾದಿನಿಂದ ವಾರ್ತೆ ಬಂದಿದೆ. ಮರಾಠವಾಡದಲ್ಲಿ ಪರೀಕ್ಷೆಗಳು ಹಂಗಾಮಿಯಾಗಿ ನಿಂತಿವೆ.

ಪುರಾತನ ದೇವಾಲಯ ಪತ್ತೆ

ಪಣಜಿಯಿಂದ ಬಂದಿರುವ ವಾರ್ತೆಯ ಪ್ರಕಾರ, ಚಂದ್ರಪುರ ಅಥವಾ ಈ ಚಂದೂರ್‌ನಲ್ಲಿ 3-4 ನೇ ಶತಮಾನದ ಪುರಾತನ ಇಟ್ಟಿಗೆಯಿಂದ ನಿರ್ಮಿಸಿದ ದೇವಾಲಯ ಪತ್ತೆ ಆಗಿದೆ. ಅನೇಕ ಶಿಲಾ ಪ್ರತಿಮೆಗಳು ದೊರೆತಿವೆ.

ಪಾರ್ಲಿಮೆಂಟಿಗೆ ಚುನಾವಣೆ

ಬೆಂಗಳೂರು— ಲೋಕಸಭೆಗೆ ಗುಲ್ಬರ್ಗಾ ಕ್ಷೇತ್ರದ ಉಪಚುನಾವಣೆ ತಾ ॥ ರಂದು ನಡೆಯುವುದು – 6 ಮಂದಿ ಸ್ಪರ್ಧಿಸಿರುವರು – 5 89 ಲಕ್ಷ ವೋಟರುಗಳಿರುವರು.

ಗುರಿ ಮೀರಿ ಉಳಿತಾಯ ಶೇಖರಣೆ

ಬಿಜಾಪುರ, ಕೊಡಗು, ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಚಿಕ್ಕ ಉಳಿತಾಯಗಳು ಗುರಿ ಮೀರಿ ಶೇಖರಿಸಲಾಗಿದೆ.

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Help The Gorakshana

— Humanitarian Propoganda Monthly....

Contribute Liberally

to the National Defence Fund

ವುಡ್‌ಲಾಂಡ್ 12 4 74 ರಿಂದ

ಅವೋಘ 3 ನೇ ವಾರ

ರಿ ಕ್ ಷಾ ವಾ ಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ– ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ಅಪೆರಾ 12 4 74 ರಿಂದ

ಕರುಳಿನ ಕರೆ

ಪಾತ್ರ – ರಾಜಕುಮಾರ್ ಕಲ್ಪನ ಒಂದು ವಾರ ಮಾತ್ರ

ಅನೋಘ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore